<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 28510-2009

ಸಿಡಬ್ಲೂ - 21ಪಿಡಬ್ಲೂ-7

ಸಾಕ್ಷಿದಾರರ ಹೆಸರು : ಗಿರಿಜಮ್ಮ
ಗಂಡನ ಹೆಸರು : ಸೋಮಶೇಖರ
ವಯಸ್ಸು : 69 ವರ್ಷ
ಕೆಲಸ : ನಿವೃತ್ತ ಎಫ್ ಡಿ ಎ
ವಾಸ : ದೇವನಹಳ್ಳಿ, ಬೆಂಗಳೂರು

<u>ಸಾಕ್ಷಿಯನ್ನು ದಿನಾಂಕಃ 26-03-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು 1997 ರಿಂದ 2001 ರವರೆಗೆ ಬೆಂಗಳೂರು ನಗರ ಖಜಾನೆಯಲ್ಲಿ ಎಸ್ ಡಿ ಎ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಚೆಕ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬಿಲ್ಲುಗಳು ಅನುಮೋದನೆಗೊಂಡು ನಮ್ಮ ವಿಭಾಗಕ್ಕೆ ಬಂದಾಗ ಬಿಲ್ಲಿನ ಅನುಸಾರ ನಾನು ಬಿಲ್ಲುಗಳನ್ನು ಬರೆದು ಕೆ ಟಿ ಸಿ 64 ನ್ನು ನೊಂದಣಿ ಮಾಡಿ ಮುಂದಿನ ಕ್ರಮಕ್ಕಾಗಿ ಚಾಸಾ 26 ರವರಿಗೆ ಕಳುಹಿಸುತ್ತಿದ್ದೇನು. ಸಾಕ್ಷಿಯು 4 ಚೆಕ್ಕುಗಳನ್ನು ನೋಡಿ ಅವುಗಳನ್ನು ತಾವು ಬರೆದಿರುವಾಗಿ ಗುರುತಿಸಿದ ಕಾರಣ ಅವುಗಳನ್ನು ನಿಪಿ. 2 ರಿಂದ 5 ಎಂದು ಗುರುತಿಸಲಾಯಿತು.

ಆ ಸಮಯದಲ್ಲಿ ಬಿಲ್ಲು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 13 ಸಿಬ್ಬಂದಿಗಳನ್ನು ಬಿಲ್ಲುಗಳು ಮತ್ತು ಚೆಕ್ಕುಗಳು ಕಳೆದ ವಿಚಾರವಾಗಿ ಅಮಾನತ್ತು ಪಡಿಸಲಾಗಿತ್ತು. ಎಲ್ಲಾ ಸರ್ಕಾರಿ ಕಚೇರಿಯ ಬಿಲ್ಲುಗಳು ನಮ್ಮ ಖಜಾನೆಗೆ ಬರುತ್ತಿದ್ದವು. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ ಇಲ್ಲಾ ಎಂದು ತಿಳಿಸಿರುತ್ತಾರೆ.</u>

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ